ವಿಗ್ರಹಗಳೆಲ್ಲ ಇದ್ದರೂ ಪ್ರಧಾನ ಆಕರ್ಷಣೆ ದತ್ತಪ್ಪನದೇ. ನಿತ್ಯಪೂಜೆಯೊಂದಿಗೆ ಗುರುವಾರ, ಶನಿವಾರ ಅಭಿಷೇಕಗಳು ತಪ್ಪದೇ ಜರುಗುತ್ತಿದ್ದವು. ವರ್ಷಕ್ಕೊಮ್ಮೆಯಾದರೂ ಗಾಣಗಾಪುರದ ಪ್ರವಾಸವಿರುತ್ತಿತ್ತು. ಅನಸಕ್ಕ ಬೆಳಗಾಗುತ್ತಲೇ, "ದತ್ತಾತ್ರೇಯಾ ತವಶರಣಂ, ದತ್ತನ್ನಾಥಾ ತವಶರಣಂ..." ಎಂದು ಆರಂಭಿಸಿದರೆ ಮುಂದಿನ ಸಾಲುಗಳನ್ನು ಮಕ್ಕಳು, "ದಿಗಂಬರಾ ತವಶರಣಂ, ದೀನ ದಯಾಘನ ತವಶರಣಂ" ಎಂದು ಹೇಳುತ್ತ ಪೂರ್ತಿಗೊಳಿಸುತ್ತಿದ್ದರು. ಮಾರ್ತಾಂಡ ಭಟ್ಟರು ಗುರುಚರಿತ್ರೆಯ ಪಾರಾಯಣದಲ್ಲಿ ಪಾರಂಗತರಾಗಿದ್ದರು. ನವರಾತ್ರಿಯಲ್ಲಿ ವಿಶೇಷವಾಗಿ 'ಗುರುಚರಿತ್ರೆ ಸಪ್ತಾಹ' ಆಚರಿತವಾಗಿ ಕೊನೆಯ ದಿನ ಅನ್ನಸಂತರ್ಪಣೆ ನಡೆಯುತ್ತಿತ್ತು. ಬಂಧುಬಳಗವೆಲ್ಲ ಒಟ್ಟಾಗಿ ಸೇರುತ್ತಿತ್ತು. ಒಟ್ಟಿನಲ್ಲಿ 'ಸರ್ವಂ ದತ್ತಮಯಂ' ಎನಿಸಿದ ಕುಟುಂಬ. ಶ್ರೀಪಾದರೂ ಅದನ್ನೇ ಮುಂದುವರೆಸಿದರು. ವೇದಾಳಿಗೆ ಇಬ್ಬರು ಓರಗಿತ್ತಿಯರೂ ಬಂದರು. ತುಂಬು ಸಂಸಾರ ನೋಡಿದ ಅನಸಕ್ಕ ಮೊಮ್ಮಕ್ಕಳನ್ನು ಆಡಿಸಿ ನಿರಾಳವಾಗಿ ದಿಗಂಬರನ ಪಾದಗಳಲ್ಲಿ ಲೀನವಾದಳು.

ಪರಂಪರಾನುಗತವಾಗಿ ಬಂದ ದೇವತಾ ಕೈಂಕರ್ಯಗಳನ್ನೆಲ್ಲಾ ತಪ್ಪದೇ ಪಾಲಿಸುತ್ತ ಶ್ರೀಪಾದ ಹೆಂಡತಿ ವೇದಾ ಮತ್ತು ಮಕ್ಕಳು ಸುನಿತಾ, ಅನಿತಾರೊಂದಿಗೆ ಗದಗದ ಮನೆಯಲ್ಲಿ ನೆಲೆ ನಿಂತ. ದತ್ತಾತ್ರೇಯ ಪತ್ನಿ ಉಮಾ ಮತ್ತು ಮಕ್ಕಳು ಉದಯ, ವಿಜಯರೊಂದಿಗೆ ಹುಬ್ಬಳ್ಳಿ ಸೇರಿದ. ಶ್ರೀಧರ ಮತ್ತು ಕುಸುಮಾ ಮಗ ಗುರುನಾಥನೊಂದಿಗೆ ಮೂರು ವರ್ಷಗಳಿಗೊಮ್ಮೆ ವರ್ಗವಾಗುತ್ತ ಬೆಳಗಾವಿ, ತುಮಕೂರು, ಮಡಿಕೇರಿ ಸುತ್ತಿ ಹಾವೇರಿಯಲ್ಲಿದ್ದರು. ನವರಾತ್ರಿಗೊಮ್ಮೆ ಎಲ್ಲರೂ ಗದಗಿನಲ್ಲಿ ಸೇರುತ್ತಿದ್ದರು. ಎಲ್ಲ ಸುಸೂತ್ರವಾಗಿ ನಡೆದಿದ್ದಾಗ ಶ್ರೀಧರ, ಕುಸುಮಾರ ಸಾವು ಇಡೀ ಕುಟುಂಬಕ್ಕೆ ಆಘಾತ ತಂದಿತ್ತು. ರಸ್ತೆ ಅಪಘಾತದಲ್ಲಿ ಇಬ್ಬರೂ ಇಲ್ಲವಾಗಿದ್ದರು. ತಬ್ಬಲಿಯಾದ ಪುಟ್ಟ ಗುರುನಾಥ ವೇದಾಳ ಮಡಿಲು ಸೇರಿದ. ಇಬ್ಬರೂ ಅವನನ್ನು ಸಂತೈಸಿದರು. 'ಅಕ್ಕ, ಅಕ್ಕ' ಎನ್ನುತ್ತ ಸುನಿತಾ, ಅನಿತಾರೊಂದಿಗೆ ಆಟವಾಡಿ ಓದುತ್ತ ಬೆಳೆಯತೊಡಗಿದ.

ಕಾಲ ಓಡುತ್ತಿತ್ತು. ಓಡುವವರನ್ನು ಬೀಳಿಸಿ ಅಳಿಸುತ್ತ, ಅಳುವವರನ್ನು ಮೇಲೆತ್ತಿ ಸಂತೈಸುತ್ತ, ಗಾಯಗಳನ್ನು ಮಾಯಿಸುತ್ತ... ಏರಿಳಿತಗಳಿಂದ ತುಂಬಿತ್ತು. ಸುನಿತ ಎಂಜಿನಿಯರಿಂಗ್ ಸೇರಿ ಓದುತ್ತಾ ಹೋದವಳು ನಿಂತದ್ದು ಅಮೆರಿಕೆಯ ಹ್ಯೂಸ್ಟನ್‌ನಲ್ಲಿಯೇ. ಅವಳು ಕೊನೆಯ ಸೆಮಿಸ್ಟರ್‌ನಲ್ಲಿರುವಾಗಲೇ ಒಳ್ಳೆಯ ಸಂಬಂಧ ಅರಸಿಕೊಂಡು ಬಂದಿತ್ತು. ಅಪ್ಪನ ಕೇದಗೆ ಬಣ್ಣ, ಅಮ್ಮನ ವಿಶಾಲ ಕಂಗಳು, ಸಂಪಿಗೆ ಮೂಗನ್ನು ಬಳುವಳಿಯಾಗಿ ಪಡೆದವಳ ಸೌಂದರ್ಯಕ್ಕೆ ಮಾರುಹೋಗದವರಿರಲಿಲ್ಲ. "ನನಗ ಈಗ ಮದವಿ ಬ್ಯಾಡಾ. ನಾ ಬೆಂಗಳೂರಾಗ ಎರಡ ವರ್ಷ ನೌಕರಿ ಮಾಡಾಕಿ" ಎಂದು ಹಟ ಹಿಡಿದಳು. ವೇದಾ, "ನೀ ಹುಡುಗನ್ನ ನೋಡ್ಯರೇ ನೋಡು, ನನಗ ಧೂರಿಂದ ಮಾಮಾನ ಮಗಾನ ಆಗಬೇಕು. ಗೊತ್ತು ಬಲ್ಲ ಮನಿತನ" ಎಂದು ಸಮಾಧಾನಿಸಿದ್ದಳು. ನಿಜವಾಗಿಯೂ ಹುಡುಗ ಅವಳಿಗೆ ತಕ್ಕ ಮನ್ಮಥನೇ. ಸುನಿತಾ ಈಗ ಚಕಾರವೆತ್ತದೇ, "ನೀವು ಹೇಳಿಧಂಗ..." ಎಂದು ಮುಗುಳ್ನಗು ಬೀರಿದ್ದಳು. ಮೂರೇ ತಿಂಗಳಲ್ಲಿ ಮದುವೆಯಾಗಿ ಹ್ಯೂಸ್ಟನ್ ಸೇರಿದ್ದಳು.

ಅನಿತಾ, "ಗಣಿತದ ಜೋಡಿ ಗುದ್ಯಾಡ್ಲಿಕ್ಕಾಗೂದಿಲ್ಲಾ" ಎನ್ನುತ್ತ ಬಿ.ಎ. ಮುಗಿಸಿ ಬಿ.ಎಡ್.ನೊಂದಿಗೆ ಶಿಕ್ಷಕಿಯಾಗಿ ಸೇರಿದಳು. ಗುರುನಾಥನೂ ಡಿಪ್ಲೊಮಾ ಮುಗಿಸಿ ಉದ್ಯೋಗಕ್ಕಾಗಿ ಪುಣೆ ಸೇರಿದ. ಉದಯ, ವಿಜಯರೂ ಪದವಿ ಮುಗಿಸಿ ಉದ್ಯೋಗಸ್ಥರಾದರು.